


# ಸಿಂಗಳೂರಿನ ಸಿಂಗಳೀಕ

■ ಪ್ರೇಮಲತಾ ಬಿ.

ಇದು ಸಿಂಗಳೂರಿನ ಕಥೆ. ಸಿಂಗಳೂರಿನ ವಿಶೇಷತೆ ಏನೆಂದರೆ ಅಲ್ಲಿನ ಜನರ ಹೆಸರಿನ ಹಿಂದೆ ಅಥವಾ ಮುಂದೆ ಸಿಂಗ ಎನ್ನುವ ವಿಶೇಷಣ ಇದ್ದೇ ಇರುತ್ತದೆ ಉದಾಹರಣೆಗೆ ಸಿಂಗರಾಜ, ಸಿಂಗರಾಣಿ, ಸಿಂಗಮ್ಮ, ಸಿಂಗಪ್ಪ ಇತ್ಯಾದಿ. ಇದು ಇನ್ನೂ ಮುಂದುವರಿದು, ಜನರು ತಮಗೆ ಇಷ್ಟವಾದ, ಮರ, ಗಿಡ, ಪ್ರಾಣಿಗಳನ್ನು, ಸಿಂಗ ನಾಮಧೇಯ ಸೇರಿಸಿಯೇ ಕರೆಯುತ್ತಿದ್ದರು.

ಸಿಂಗಳೂರಿನ ಒಳಗೆ ಪ್ರವೇಶಿಸುತ್ತಿದ್ದ ಹಾಗೆಯೇ, ದೊಡ್ಡದೊಂದು, ಮೈದಾನ ಸಿಗುವುದು. ಅದರ ಹತ್ತಿರದಲ್ಲಿಯೇ ವಿಶಾಲವಾದ ಸಿಂಗ ಮಾವಿನ ಮರ. ಆ ಮರ ಬಹಳ ದೊಡ್ಡದಾಗಿತ್ತು ವಿಶಾಲವಾದ ಮರದಲ್ಲಿ ಹಲವಾರು ಪ್ರಾಣಿ ಪಕ್ಷಿಗಳು ವಾಸವಾಗಿದ್ದವು. ಹೂವು– ಹಣ್ಣುಗಳು ಬಿಡುವ ಸಂದರ್ಭದಲ್ಲಂತೂ ಕೇಳುವುದೇ ಬೇಡ– ದುಂಬಿಗಳ ಝೇಂಕಾರ, ಪಕ್ಷಿಗಳ ಕಲರವ, ಆ ಪರಿಸರದ ಶೋಭೆಯನ್ನು ಹೆಚ್ಚಿಸುತ್ತಿತ್ತು.

ಮರದ ಸುತ್ತಲೂ ಕಟ್ಟೆಯನ್ನು ಕಟ್ಟಿದ್ದರಿಂದ, ಕುಳಿತುಕೊಳ್ಳಲು ಅನುಕೂಲವಾಗಿತ್ತು. ಆ ಊರಿನ ಮಕ್ಕಳು ಕೂಡ ವಿಶಾಲವಾದ ಮೈದಾನದಲ್ಲಿ ಆಡಿ, ದಣಿದು ಸುಸ್ತಾದಾಗ, ಆ ಮರದ ನೆರಳಿನಲ್ಲಿ ಕುಳಿತುಕೊಳ್ಳುತ್ತಿದ್ದರು. ಆ ಊರಿನ ಹಲವಾರು ಸಮಸ್ಯೆಗಳ ಪರಿಹಾರಕ್ಕಾಗಿ ನಡೆಸುವ ಸಭೆಗಳೂ ಕೂಡ ಆ ಮರದ ಕೆಳಗೆ ನಡೆಯುತ್ತಿದ್ದವು.

ಆ ಊರಿನಲ್ಲಿ ಒಬ್ಬ ಶ್ರೀಮಂತ ಜಮೀನ್ದಾರ ಇದ್ದನು. ಅವನ ಹೆಸರು ರಾಜ ಸಿಂಗ ಬಹದ್ದೂರ್. ಊರಿನಲ್ಲಿ ಹೆಚ್ಚಿನ ಬಡವರು ರಾಜ ಸಿಂಗರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು. ಹಾಗಾಗಿ ಅವರೆಂದರೆ ಎಲ್ಲರೂ ಭಯ ಭಕ್ತಿ ಭಾವದಿಂದ ಗೌರವಿಸುತ್ತಿದ್ದರು.

ಆ ಊರಿನ ದೇವಸ್ಥಾನದಲ್ಲಿ ಅರ್ಚಕರಾಗಿದ್ದ ಕುಮಾರ ಸಿಂಗ ಶರ್ಮನ ಮಗ ಸಿಂಗಳೀಕ ಎಂದೇ ಊರಲ್ಲಿ ಖ್ಯಾತನಾಗಿದ್ದನು. ಸಿಂಗಳೀಕ ಮೊದಲಿನಿಂದಲೂ ತುಂಬಾ ಬುದ್ಧಿವಂತ ಹುಡುಗನಾಗಿದ್ದು, ಕಾಲೇಜಿನಲ್ಲೂ ಕಲಿತಿದ್ದರಿಂದ ಜನರು ತಮ್ಮ ಸಮಸ್ಯೆಗಳಿಗಾಗಿ ಆತನ ಬಳಿಗೂ ಹೋಗುತ್ತಿದ್ದರು. ಸಿಂಗ ಮಾವಿನ ಮರದಡಿಯಲ್ಲಿ ಮಕ್ಕಳಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ. ಆತ ಮಕ್ಕಳಿಗೆಲ್ಲ ಸಿಂಗ ಮಾಮ ಆಗಿದ್ದು, ಬಿಡುವಿನ ಸಮಯದಲ್ಲಿ, ಮಕ್ಕಳನ್ನು, ಮರದ ಕೆಳಗೆ ಕೂರಿಸಿ, ಒಳ್ಳೆಯ ವಿಚಾರಗಳನ್ನು, ಆಟಗಳನ್ನು ಕಲಿಸುತ್ತಿದ್ದನು.

ಆ ದಿನ ಮಕ್ಕಳು ಆಟವಾಡುತ್ತಾ, ಮರದ ಕೆಳಗೆ ಬಂದಾಗ, ಜಮೀನ್ದಾರ ರಾಜ ಸಿಂಗರ ಜೊತೆಗೆ ನಾಲ್ಕಾರು ಜನ ಅಪರಿಚಿತ ವ್ಯಕ್ತಿಗಳನ್ನು ಕಂಡರು. ಅವರು ಸಿಂಗ ಮಾವಿನ ಮರವನ್ನು ಕಡಿದು ಹಾಕುವ ಬಗ್ಗೆ ಮಾತನಾಡುತ್ತಿರುವುದು ಮಕ್ಕಳಿಗೆ ತಿಳಿದು ಅವರಿಗೆಲ್ಲ ದುಃಖವಾಯಿತು. ಅವರಿಗೆ ಆ ದಿನ ಆಟವಾಡಲು ಸಾಧ್ಯವೇ ಆಗಲಿಲ್ಲ.

ಮರುದಿನ ಬೆಳಿಗ್ಗೆ, ರಾಜ ಸಿಂಗರು ಊರವರನ್ನೆಲ್ಲ ಕರೆದು ಸಭೆ ಸೇರಿಸಿದ್ದರು. 'ನೋಡಿ ನಿಮಗೆಲ್ಲಾ ಮುಖ್ಯವಾದ ವಿಷಯವೊಂದನ್ನು ಹೇಳಬೇಕಾಗಿದೆ. ನಮ್ಮ ಗ್ರಾಮದ ಯುವಕರಿಗೆ ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವ ಸಲುವಾಗಿ ನಾನು ಒಂದು ನಿರ್ಧಾರಕ್ಕೆ ಬಂದಿದ್ದೇನೆ. ನಮ್ಮ ಗ್ರಾಮದಲ್ಲಿ ಒಂದು ಕಾರ್ಖಾನೆಯನ್ನು ತೆರೆಯಲು ನಿರ್ಧರಿಸಿದ್ದೇನೆ. ಅದಕ್ಕೆ ನಗರದಲ್ಲಿರುವ ನನ್ನ ಸ್ನೇಹಿತರು ಸಹಾಯ ಮಾಡುತ್ತಿದ್ದಾರೆ. ಆದರೆ ಇದಕ್ಕಾಗಿ ಸಿಂಗ ಮಾವಿನ ಮರವನ್ನು ಬುಡದಿಂದಲೇ ಕಡಿದು ಆ ಜಾಗವನ್ನು ತೆರವುಗೊಳಿಸಬೇಕು, ಮೈದಾನವನ್ನು ಬಳಸಬೇಕಾಗಬಹುದು' ಎಂದು ಘೋಷಿಸಿದರು.